ತ್ರಿವೇಣಿ Triveni
Tri-State Kannada Cultural Association

ನನ್ನ ಪ್ರಿಯ ತ್ರಿವೇಣಿ ಕುಟುಂಬದ ಸಹೋದರ–ಸಹೋದರಿಯರೆ,

ಮೊಟ್ಟ ಮೊದಲಿಗೆ, ನಮ್ಮ ನೂತನ ತ್ರಿವೇಣಿ ಕಾರ್ಯಾಂಗ ಸಮಿತಿ ಸದಸ್ಯರ ಪರವಾಗಿ ಸಮಸ್ತ ತ್ರಿವೇಣಿ ಸದಸ್ಯರಿಗೆ "ಹಾರ್ದಿಕ, ಆರೋಗ್ಯಕರ ಹಾಗೂ ಸಮೃದ್ಧ ಹೊಸ ವರ್ಷ–೨೦೧೨ ಹಾಗೂ ಮಕರ ಸಂಕ್ರಾಂತಿ ಹಬ್ಬದ ಶುಭಾಶಯಗಳನ್ನು" ಕೋರಲು ಇಚ್ಛಿಸುತ್ತೇನೆ.

೨೦೧೨–೨೦೧೩ ನೇ ಸಾಲಿಗೆ ತ್ರಿವೇಣಿ ಕನ್ನಡ ಮತ್ತು ಸಂಸ್ಕೃತಿ ಸಂಸ್ಥೆಯ ಸೇವೆಯನ್ನು ಮಾಡಲು ಅವಕಾಶ ಕಲ್ಪಿಸಿಕೊಟ್ಟ ಸರ್ವ ಸದಸ್ಯರಿಗೂ ನಾನು, ನನ್ನ ಕಾರ್ಯಾಂಗ ಸಮಿತಿಯ ಸದಸ್ಯರ ಪರವಾಗಿ ಧನ್ಯವಾದಗಳನ್ನು ಅರ್ಪಿಸಲಿಚ್ಛಿಸುತೇನೆ. ನಿಮ್ಮ ಪ್ರೀತಿ, ಅಭಿಮಾನ ಮತ್ತು ಉತ್ತೇಜನ ತೋರುವ ಜೊತೆಗೆ, ನನ್ನ ನಾಯಕತ್ವದಲ್ಲಿ ಹಾಗೂ ನಮ್ಮ ವೃಂದದವರ ಮೇಲಿಟ್ಟಿರುವ ವಿಶ್ವಾಸಕ್ಕೆ ಆಭಾರಿಯಾಗಿದ್ದೇನೆ.

ನಮ್ಮ ಕಾರ್ಯಾಂಗ ಸಮಿತಿಯ ಪರವಾಗಿ ಶ್ರೀ ಉಮೇಶ ಜೋಯಿಸ್ ರವರ ನಿರಂತರ ಬೆಂಬಲ ಹಾಗೂ ಉತ್ತೇಜನಕ್ಕೆ, ಶ್ರೀ ಟಿ.ಎನ್. ರಾಜಶೇಖರ ರವರ ಸಹೃದಯಿ ಉತ್ತೇಜನಕ್ಕೆ ಧನ್ಯವಾದಗಳು. ಕನ್ನಡ ಮತ್ತು ಸಂಸ್ಕೃತಿಯನ್ನು ಜೀವಂತವಾಗಿಡಲು ಶ್ರಮಿಸಿದ ನಮ್ಮ ಈ ಹಿಂದಿನ ಎಲ್ಲ ಅಧ್ಯಕ್ಷರುಗಳು, ಕಾರ್ಯಾಂಗ ಸಮಿತಿಯ ಸದಸ್ಯರುಗಳು ಹಾಗೂ ಸಮಸ್ತ ಸದಸ್ಯರುಗಳಿಗೆ ನಮ್ಮ ಅಭಿನಂದನೆಗಳನ್ನರ್ಪಿಸಲಿಚ್ಛಿಸುತ್ತೇವೆ. ಅತ್ಯದ್ಭುತವಾದ ಕೆಲಸ ಹಾಗೂ ಅಪಾರ ಕಲಾಸೇವೆಯನ್ನು ಮಾಡಿರುವ ಎಲ್ಲರಿಗೂ ಈ ಸಂದರ್ಭದಲ್ಲಿ ನಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಲಿಚ್ಛಿಸುತ್ತೇವೆ.

ತ್ರಿವೇಣಿ ಸಂಸ್ಥೆಯು ಜೂನ್ ೨೬, ೧೯೮೬ ರಂದು ಉದಯಿಸಿ ತನ್ನ ಬೆಳ್ಳಿ ಹಬ್ಬದ ವರ್ಷವನ್ನಾಚರಿಸಿ ರಜತ ಮಹೋತ್ಸವದತ್ತ ಸಾಗುತ್ತಿದೆ ಎಂದು ತಿಳಿಸಲು ಹರ್ಷಿಸುತ್ತೇನೆ. ಈ ಎಲ್ಲದರ ಫಲ ನಮ್ಮ ಸಂಸ್ಥೆಗೆ ಭದ್ರ ತಳಪಾಯ ಹಾಕಿ, ಕನ್ನಡ ಸಮುದಾಯವನ್ನ ಒಗ್ಗೂಡಿಸುವ ಆಕಾಂಕ್ಷೆಯಿಂದ ನಿಸ್ವಾರ್ಥ ಸೇವೆಯನ್ನು ಮಾಡಿರುವ ಎಲ್ಲ ಮಹನೀಯರಿಗೂ ಸಲ್ಲಬೇಕು. ನಿಮ್ಮೆಲ್ಲರ ಪ್ರೀತಿ, ವಿಶ್ವಾಸ, ತುಂಬು ಹೃದಯದ ಬೆಂಬಲ, ಸಹಕಾರ, ಎಲ್ಲಕ್ಕಿಂತಲೂ ಮಿಗಿಲಾಗಿ ನಿಮ್ಮಂತಹ ಕನ್ನಡ ಆರಾಧಕರಿಲ್ಲದಿದ್ದ ಪಕ್ಷದಲ್ಲಿ, ಈ ಸಾಧನೆ ಸಾಧ್ಯವಾಗುತ್ತಿರಲಿಲ್ಲ ಎಂಬುದು ಸತ್ಯದ ಸಂಗತಿ. ನಮ್ಮ ಸಂಸ್ಥೆಗೆ ದಾನ, ದತ್ತಿ ಹಾಗೂ ಧರ್ಮದ ಮುಖೇಣ ನಿಸ್ವಾರ್ಥವಾಗಿ, ಉದಾರ ಮನಸ್ಸಿನಿಂದ ನಮ್ಮ ಸಂಸ್ಥೆಯ ಏಳಿಗೆಗಾಗಿ ಸಹಾಯ ಮಾಡಿಕೊಂಡು ಬರುತ್ತಿರುವ ಎಲ್ಲ ಮಹಾನುಭಾವರುಗಳಿಗೂ, ಸಮಸ್ತ ತ್ರೀವೇಣಿ ಕುಟುಂಬದ ಪರವಾಗಿ ಪ್ರಣಾಮಗಳನ್ನರ್ಪಿಸಲಿಚ್ಛಿಸುತ್ತೇವೆ. "ಎಷ್ಟೋ ಮಂದಿ ಮಹನೀಯರುಗಳು, ಎಲ್ಲರಿಗೂ ನಮ್ಮ ವಂದನೆಗಳು".

ಸಂಸ್ಥೆಯ ಕಾರ್ಯ ನಿರ್ವಹಿಸಲು, ನನ್ನೊಂದಿಗೆ ಕಂಕಣತೊಟ್ಟು, ಹೆಗಲಿಗೆ–ಹೆಗಲು ಕೊಡಲು ಸಿದ್ಧರಾಗಿ, ಬಹಳ ಉತ್ಸಾಹವುಳ್ಳ ಕಾರ್ಯಾಂಗ ಸಮಿತಿಯ ಸದಸ್ಯರು ನನ್ನೊಂದಿಗಿದ್ದಾರೆಂದು ತಿಳಿಸಲು ನನಗೆ ಬಹಳ ಹೆಮ್ಮೆಯಾಗುತ್ತದೆ.

ನಮ್ಮ ಮೊದಲನೆಯ ದಾಸೋತ್ಸವ ಕಾರ್ಯಕ್ರಮವನ್ನು ಎಂದಿನಂತೆ ಫೆಬ್ರವರಿ ತಿಂಗಳಿನಲ್ಲಿ ಆಚರಿಸಲು ಆಯೋಜಿಸಿದ್ದೇವೆ. ಈಗಾಗಲೇ ಅದಕ್ಕೆ ಸಂಬಂಧಪಟ್ಟಂತೆ ಪೂರ್ವಸಿದ್ಧತೆಗಳು ಭರದಿಂದ ಸಾಗುತ್ತಿವೆ. ದಾಸೋತ್ಸವದ ದಿನಾಂಕ ಹಾಗೂ ಸ್ಥಳದ ವಿವರಗಳನ್ನು, ಅತಿ ಶೀಘ್ರದಲ್ಲಿ ನಿಮಗೆ ತಿಳಿಸುತ್ತೇವೆ.

೨೦೧೨ನೇ ವರ್ಷದ ಸಾಲಿನಲ್ಲಿ, ಕೆಲವು ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಉದ್ದೇಶಿಸಿದ್ದೇವೆ. ಅದಕ್ಕೆ ಸಂಬಧಿಸಿದಂತೆ ಈ ಕೆಳಕಂಡ ಕೆಲವು ಕಾರ್ಯಸೂಚಿಯಲ್ಲಿರುವ ವಿಷಯಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಇಚ್ಛಿಸುತ್ತೇನೆ :

- ‘‘ಸದಸ್ಯತ್ವ ವರ್ಧಕ ವರ್ಷ’’ – ಸಂಘಕ್ಕೆ ಸದಸ್ಯರೆ ಸರ್ವಸ್ವ – ಸದಸ್ಯತ್ವವನ್ನು ವೃದ್ಧಿಸುವುದರ ಬಗ್ಗೆ ನಮ್ಮ ಚಿಂತನೆ ನಡೆಸುತ್ತಿದ್ದೇವೆ. ಇದರ ಬಗ್ಗೆ ಮುಖ್ಯವಾಗಿ ಗಮನ ಹರಿಸಲು ಉದ್ದೇಶಿಸಿದ್ದೇವೆ. ಸಹಜವಾಗಿ ಇದು ಒಬ್ಬ ವ್ಯಕ್ತಿಯಿಂದಾಗುವ ಕೆಲಸವಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯ. ಈ ನಿಟ್ಟಿನಲ್ಲಿ ನಾವೆಲ್ಲರೂ ಒಗ್ಗೂಡಿ ಶ್ರಮಿಸಬೇಕಿದೆ.

- ‘‘ನಮ್ಮ ನಾಡು–ನುಡಿ’’ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ನಿರ್ಧರಿಸಿದ್ದೇವೆ. ಇದರ ಮುಖ್ಯ ಉದ್ದೇಶ, ನಮ್ಮ ಮುಂದಿನ ಪೀಳಿಗೆಗೆ ಕನ್ನಡ ನುಡಿ, ಸಂಸ್ಕೃತಿ, ಸಂಗೀತ, ಸಾಹಿತ್ಯ, ನಾಟ್ಯ ಮತ್ತು ನಾಟಕ ರಂಗಗಳನ್ನು ಪರಿಚಿಸುವುದು ಹಾಗೂ ಬೆಳೆಸುವುದಾಗಿದೆ. ಇದು ನಮ್ಮ ಮುಂದಿನ ಪೀಳಿಗೆಗೆ, ನಮ್ಮ ಶ್ರೀಮಂತ ಪರಂಪರೆಯ ಅರಿವು ಮೂಡಿಸುವುದರ ಜೊತೆಗೆ ಕನ್ನಡ ಭಾಷೆಯ ಬಗ್ಗೆ ಅಭಿಮಾನ ಹಾಗು ಪ್ರೀತಿಯನ್ನು ತುಂಬುವ ಉದ್ದೇಶವಾಗಿದೆ. ಇದನ್ನು ಕಾರ್ಯರೂಪಕ್ಕೆ ತರಲು ನಮ್ಮಲ್ಲಿ ಕೆಲವು ಕನ್ನಡ ಉತ್ಸಾಹಿಗಳು ಮುಂದಾಗಿದ್ದು, ಮತ್ತಷ್ಟು ಸ್ವಯಂಸೇವಕರ ಅಗತ್ಯವಿದೆ.

- ‘‘ತ್ರಿವೇಣಿ–ವಾಣಿ’’ ಇ–ಸುದ್ದಿ ವಾಹಿನಿ (ಇ–ನ್ಯೂಸ್ ಲೆಟರ್) –– ಶಿಕ್ಷಣ, ಆರೋಗ್ಯ, ಯೋಗ, ಸಣ್ಣ ಕಥೆ–ಕವನಗಳು, ಹಾಸ್ಯ ಚಟಾಕಿಗಳು, ಆಹಾರ ಪಾಕ–ವಿಧಾನಗಳು, ಮೊದಲಾದ ವಿವಿಧ ವಿಷಯಗಳನ್ನೊಳಗೊಂಡ ‘‘ತ್ರಿವೇಣೀ–ವಾಣಿ’’ ಎಂಬ ಇ–ಸುದ್ದಿ–ವಾಹಿನಿಯನ್ನು ಪ್ರಾರಂಭಿಸಲು ಮುಂದಾಗಿದ್ದೇವೆ.
- ‘‘ನಮ್ಮ ಸದಸ್ಯರ ನೇರ ಮಾತು’’ ಎಂಬ ವಿಚಾರ ವೇದಿಕೆಯ ವಿಭಾಗವನ್ನು ನಮ್ಮ ತ್ರಿವೇಣಿ ವೆಬ್ಸೈಟಿನಲ್ಲಿ ಅಳವಡಿಸಲು ಸಮಾಲೋಚಿಸುತ್ತಿದ್ದೇವೆ. ಯಾವುದೇ ಸಂಘ–ಸಂಸ್ಥೆ ಬೆಳೆಯಬೇಕಾದರೆ, ಸದಸ್ಯರ ಅಭಿಪ್ರಾಯ ಬಹು ಮುಖ್ಯ. ನಿಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಲು ಹಾಗೂ ಸಲಹೆಗಳನ್ನು ನೀಡಲು ಈ ವಿಭಾಗ ಒಂದು ಸಾಧನೆಯಾಗುತ್ತದೆ. ಇದರಿಂದ ನಮ್ಮ ತಪ್ಪುಗಳನ್ನು ತಿದ್ದಿಕೊಳ್ಳಲು ಸಹಕಾರಿಯಾಗುವುದರ ಜೊತೆಗೆ ಸುಧಾರಣೆಗೆ ಆಯುಧವಾಗುತ್ತದೆ.

ಸಹಜವಾಗಿಯೇ ಮೇಲೆ ತಿಳಿಸಿರುವ ವಿಚಾರಗಳನ್ನು ಕಾರ್ಯರೂಪಕ್ಕೆ ತರಲು ನಿಮ್ಮೆಲ್ಲರ, ಅದರಲ್ಲೂ ಹಿರಿಯ ಸದಸ್ಯರ ನೆರವು ಹಾಗೂ ಸೇವೆ ಅತ್ಯಗತ್ಯ. ದಯಮಾಡಿ ನಿಮ್ಮ ಅನಿಸಿಕೆಗಳನ್ನು ತಿಳಿಸಿ. ನಮಗೆ ನಿಮ್ಮ ಸಲಹೆಗಳ ಅಗತ್ಯವಿದ್ದು, ನಿಮ್ಮ ಅಭಿಪ್ರಾಯಗಳಿಗೆ ಎದುರು ನೋಡುತ್ತಿರುತ್ತೇವೆ.

ಸದಸ್ಯರ ಮಾಹಿತಿಗನ್ನು ಪರಿಶೀಲಿಸುತ್ತಿದ್ದಾಗ, ಕೆಲವು ಬಳಕೆಯಲ್ಲಿಲ್ಲದ ಮತ್ತು ಹಳೆಯ ವಿಳಾಸ/ಅಪೂರ್ಣ ಮಾಹಿತಿ ಕಂಡುಬಂದಿದ್ದು, ನಮ್ಮೆಲ್ಲಾ ಸದಸ್ಯರ ಮಾಹಿತಿಯನ್ನು ಮತ್ತೊಮ್ಮೆ ಪಡೆದು ಕಲೆಹಾಕಬೇಕೆಂದು ನಿರ್ಧರಿಸಿದ್ದು, ಈ ದಿಶೆಯಲ್ಲಿ ನಿಮ್ಮ ಸಹಾಯವನ್ನು ಕೋರುತ್ತಿದ್ದೇವೆ. ಕೆಳಗೆ ನಮೂದಿಸಿರುವ ಕೊಂಡಿಯನ್ನು ಒತ್ತಿ (ಲಿಂಕ್), ನಿಮ್ಮ ವಿವರಗಳನ್ನು ತುಂಬಿ ಸಹಕರಿಸಬೇಕೆಂದು ನಿಮ್ಮಲ್ಲಿ ನಮ್ಮ ಸವಿನಯ ಪ್ರಾರ್ಥನೆ :

**ತ್ರಿವೇಣಿ ಕನ್ನಡ ಸಂಘದ ನೋಂದಣಿ ನಮೂನೆ ಪತ್ರಕ್ಕೆ – ಈ ಕೊಂಡಿಯನ್ನು ಒತ್ತಿ**

ತ್ರಿವೇಣಿಯ ಘನತೆ ಹಾಗು ಗೌರವವನ್ನು ಕಾಪಾಡಿಕೊಂಡು ಬರಲು ಆ ಭಗವಂತ ಶಕ್ತಿ ಕೊಡುವನೆಂಬ ನಂಬಿಕೆಯ ಜೊತೆಗೆ ನನ್ನ ಅತ್ಯುತ್ಸಾಹಿತ ಕಾರ್ಯಾಂಗ ಸಮಿತಿ ಸದಸ್ಯರ ಸಹಾಯದಿಂದ ಹಾಗೂ ನಿಮ್ಮೆಲ್ಲರ ಅಪಾರ ಪ್ರೀತಿ–ಪ್ರೋತ್ಸಾಹದೊಂದಿಗೆ, ನಿಮ್ಮೆಲ್ಲರ ನಿರೀಕ್ಷೆಗಳನ್ನು ಪೂರೈಸುತ್ತೇನೆಂಬ ನಂಬಿಕೆ ನನಗಿದೆ.

ನಿಮ್ಮೆಲ್ಲರ ಸಂಪೂರ್ಣ ಬೆಂಬಲ, ಸಹಕಾರ ಮತ್ತು ಉತ್ತೇಜನದ ಜೊತೆಗೆ ಭವಿಷ್ಯದ ನಮ್ಮೆಲ್ಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾಗಿ ಈ ಮೂಲಕ ತಮ್ಮಲ್ಲಿ ಕಳಕಳಿಯ ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇವೆ.

ಟ್ರೈ–ಸ್ಟೇಟ್ ತ್ರಿವೇಣಿ ಕನ್ನಡ ಮತ್ತು ಸಾಂಸ್ಕೃತಿಕ ಸಂಘದ
ಎಲ್ಲಾ ಕಾರ್ಯಾಂಗ ಸಮಿತಿಯ ಸದಸ್ಯರ ಪರವಾಗಿ,
ಇಂತಿ ತಮ್ಮ ವಿಧೇಯ,

***ದತ್ತ ಕುಮಾರ್***